## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** 1) ಶ್ರೀ ಎಸ್. ಶಶಿಕುಮಾರ್ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಕಲೇಶಪುರ 2) ಶ್ರೀ ಕೆ.ತಿಮ್ಮಶೆಟ್ಟಿ, ಹಿಂದಿನ ಕಾರ್ಯದರ್ಶಿ, ಆನೆಮಹಲ್ ಗ್ರಾ.ಪಂ. ಸಕಲೇಶಪುರ ತಾಲ್ಲೂಕು 3) ಶ್ರೀ ಚಂದ್ರಶೇಖರ್, ಪಂಚಾಯತಿ ವಿಸ್ತರ್ಣಾಧಿಕಾರಿ ತಾ.ಪಂ. ಸಕಲೇಶಪುರ 4) ಶ್ರೀ ಆರ್.ಪಿ. ಶಿವಕುಮಾರ್, ಪ್ರಭಾರ ಪಂಚಾಯತಿ ವಿಸ್ತರ್ಣಾಧಿಕಾರಿ ಇವರುಗಳ ವಿರುದ್ಧದ ಶಿಸ್ತು ಕ್ರಮ – ಆದೇಶ.

**ಓದಲಾಗಿದೆ:** 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ,ಹಾಸನ ಇವರ ಪತ್ರ ಸಂಖ್ಯೆ: ಜಿಪಂಹಾ/ಆಸಿ-12/ಆ ಗ್ರಾಪಂ/ಹ.ದು./2008-09 ದಿ.21-3-2013

2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/124/ವಿಸೇಬಿ/2010 ದಿ:21-02-2013, 19-11-2013

3. ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳು

------

**ಪ್ರಸ್ತಾವನೆ:**

ಸಕಲೇಶಪುರ ತಾಲ್ಲೂಕು ಆನೆಮಹಲ್ ಗ್ರಾಮ ಪಂಚಾಯತಿಯಲ್ಲಿ ಸಣ್ಣ ನೀರಾವರಿ ಯೋಜನೆಯಡಿ ಬಿಡುಗಡೆಯಾಗಿದ್ದ ಅನುದಾನವನ್ನು ಮಾರ್ಗಪಲ್ಲಟ ಮಾಡಿರುವ ಸಂಬಂಧ ಈ ಕೆಳಕಂಡ ಅಧಿಕಾರಿ/ನೌಕರರುಗಳಿಗೆ ನಿಯಮ 11 ರಡಿಯಲ್ಲಿ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ: 21-02-2013 ರಲ್ಲಿ ಜಾರಿ ಮಾಡಲಾಗಿತ್ತು.

1) ಶ್ರೀ ಎಸ್. ಶಶಿಕುಮಾರ್ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಕಲೇಶಪುರ

2) ಶ್ರೀ ಕೆ.ತಿಮ್ಮಶೆಟ್ಟಿ, ಹಿಂದಿನ ಕಾರ್ಯದರ್ಶಿ, ಆನೆಮಹಲ್ ಗ್ರಾ.ಪಂ. ಸಕಲೇಶಪುರ ತಾಲ್ಲೂಕು

3) ಶ್ರೀ ಎಂ.ಸಿ.ಚಂದ್ರಶೇಖರ್, ಪಂಚಾಯತಿ ವಿಸ್ತರ್ಣಾಧಿಕಾರಿ ತಾ.ಪಂ. ಸಕಲೇಶಪುರ

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ದಿನಾಂಕ: 21-03-2013 ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಇವರು ಆನೆಮಹಲ್ ಗ್ರಾಮ ಪಂಚಾಯತಿಯಲ್ಲಿ ಸಣ್ಣ ನೀರಾವರಿ ಯೋಜನೆಯಡಿ ಬಿಡುಗಡೆಯಾಗಿದ್ದ ಅನುದಾನವನ್ನು ಮಾರ್ಗಪಲ್ಲಟ ಮಾಡಿರುವ ಅವಧಿಯಲ್ಲಿ ಶ್ರೀ ಎಂ.ಸಿ.ಚಂದ್ರಶೇಖರ್, ಪಂಚಾಯತಿ ವಿಸ್ತರ್ಣಾಧಿಕಾರಿ ತಾ.ಪಂ. ಸಕಲೇಶಪುರ ಇವರು ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸದೇ ಇರುವುದರಿಂದ ಈ ಪ್ರಕರಣದಿಂದ ಕೈಬಿಡಲು ಕೋರಿರುತ್ತಾರೆ.

ತದನಂತರ ಶ್ರೀ ಎಂ.ಸಿ.ಚಂದ್ರಶೇಖರ್, ಪಂಚಾಯತಿ ವಿಸ್ತರ್ಣಾಧಿಕಾರಿ ತಾಲ್ಲೂಕು ಪಂಚಾಯತಿ ಸಕಲೇಶಪುರ ಇವರನ್ನು ಪ್ರಕರಣದಿಂದ ಕೈಬಿಡಲು ನಿರ್ಣಯಿಸಿ ಸದರಿ ಅವಧಿಯಲ್ಲಿ ಪಂಚಾಯತಿ ವಿಸ್ತರಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಆರ್.ಪಿ. ಶಿವಕುಮಾರ್, ಇವರೂ ಸೇರಿದಂತೆ ಶ್ರೀ ಎಸ್. ಶಶಿಕುಮಾರ್, ಶ್ರೀ ಕೆ.ತಿಮ್ಮಶೆಟ್ಟಿ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11 ರಡಿಯಲ್ಲಿ ದಿ: 21-02-2013 ರಂದು ನೀಡಲಾಗಿದ್ದ ಕಾರಣ ಕೇಳುವ ನೋಟೀಸನ್ನು ಹಿಂಪಡೆದು ನಿಯಮ 12(1)(ಎ) ರಡಿಯಲ್ಲಿ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ: 19-11-2013 ರಂದು ಜಾರಿ ಮಾಡಲಾಗಿತ್ತು.

**ಶ್ರೀ ಎಸ್. ಶಶಿಕುಮಾರ್ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಕಲೇಶಪುರ ಇವರ ವಿರುದ್ಧದ ದೋಷಾರೋಪಗಳು**

ಇವರು ದಿನಾಂಕ 7-6-2006 ರಿಂದ 8-10-2009 ರ ವರೆಗೆ ಸಕಲೇಶಪುರ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ, ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ

ಆನೆಮಹಲ್ ಗ್ರಾಮ ಪಂಚಾಯಿತಿಯಲ್ಲಿ ದಿ 29-06-2006 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಸಣ್ಣ ನೀರಾವರಿ ಯೋಜನೆಯಲ್ಲಿ ಗ್ರಾಮ ಪಂಚಾಯಿತಿಗೆ ಬಿಡುಗಡೆಯಾಗಿದ್ದ ಅನುದಾನವನ್ನು ನಿಯಮ ಬಾಹಿರವಾಗಿ ಮಾರ್ಗಪಲ್ಲಟ ಮಾಡಿ ಪುನ: ಮರು ಜಮಾ ಮಾಡುವುದಾಗಿ ನಿರ್ಣಯಿಸಿ ಬೇರೆ ಉದ್ದೇಶಕ್ಕೆ ಖರ್ಚು ಮಾಡಲಾಗಿದೆ. ಸದರಿ ಕಾನೂನು ಬಾಹಿರ ನಿರ್ಣಯದ ಬಗ್ಗೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಪರಿಶೀಲಿಸಿರುವುದಿಲ್ಲ ಹಾಗೂ ಅನುದಾನವನ್ನು ಅವರ ಅಧಿಕಾರದ ಅವಧಿಯಲ್ಲಿ ಮರು ಜಮೆ ಮಾಡುವ ಬಗ್ಗೆ ಕ್ರಮ ವಹಿಸಿರುವುದಿಲ್ಲ ಎಂಬುದಾಗಿ ಆರೋಪ. ಇದು ಇವರ ಕರ್ತವ್ಯ ನಿರ್ಲಕ್ಷ್ಯತೆಯಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) ನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವುದಾಗಿ ಆರೋಪ.

**ಮೇಲ್ಕಂಡ ಕಾರಣ ಕೇಳುವ ನೋಟೀಸಿಗೆ ಶ್ರೀ ಎಸ್. ಶಶಿಕುಮಾರ್, ಇವರು ಮೇಲೆ ಓದಲಾದ (3) ರಲ್ಲಿನ ಪತ್ರದಲ್ಲಿ ಈ ಕೆಳಕಂಡಂತೆ ತಮ್ಮ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.**

ಆರೋಪದಲ್ಲಿ ಹೇಳಿರುವಂತೆ ಸಕಲೇಶಪುರದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದು ನಿಜವಾದ ವಿಚಾರ, ಸಕಲೇಶಪುರದ ತಾ.ಪಂ. ಯು ಸಾಕಷ್ಟು ಸಂಖ್ಯೆಯ ಗ್ರಾ.ಪಂ.ಗಳನ್ನು ಹೊಂದಿರತಕ್ಕಂತಹ ವ್ಯಾಪ್ತಿ ಹೊಂದಿದೆ. ಪ್ರತಿ ಗ್ರಾ.ಪಂ. ಯು ಅದರ ವ್ಯಾಪ್ತಿಗೆ ಅಧಿಕಾರ ಚಲಾಯಿಸಲು ಒಂದು ಮಿನಿ ಗೌರ್ನಮೆಂಟ್ ಎಂಬ ಸ್ಥಳೀಯ ವ್ಯವಸ್ಥೆಯನ್ನು ಹೊಂದಿದೆ ಎಂದು ತಿಳಿಯಬಹುದಾಗಿದೆ. ಪ್ರತಿ ಗ್ರಾ.ಪಂ. ಗೂ ಪದಾಧಿಕಾರಿಗಳು ಸ್ಥಳೀಯರುಗಳಿಂದ ಆಯ್ಕೆಯಾಗಿ ಬಂದಿರುತ್ತಾರೆ. ಜಿ.ಪಂ. ಕಾಯ್ದೆಯಲ್ಲಿ ಪ್ರತಿ ಗ್ರಾ.ಪಂ. ಯು ಚುನಾಯಿತ ಪ್ರತಿನಿಧಿಗಳಿಂದ ನಡೆಸಲ್ಪಡುವುದೇ ಆಗಿರುತ್ತದೆ. ಹೀಗೆ ಪ್ರತಿ ಗ್ರಾ.ಪಂ. ಯು ನಿರ್ವಹಿಸುವ ಕೆಲಸ ಕಾರ್ಯಗಳು, ನಿರ್ಧಾರಗಳು ಮತ್ತು ನಿರ್ಣಯಗಳು ಶಾಸನಬದ್ಧ ಅಸ್ತಿತ್ವವನ್ನೇ ಹೊಂದಿರುತ್ತದೆ. ವಿಷಯ ಹೀಗಿದ್ದಾಗ ಸಕಲೇಶಪುರ ತಾಲ್ಲೂಕಿನ ಆನೇಮಹಲ್ ಗ್ರಾ.ಪಂ. ಯಲ್ಲಿ ಕ್ರಮಬದ್ಧವಾಗಿ ಆಯ್ಕೆಯಾದ ಪದಾಧಿಕಾರಿಗಳು (ಜನಪ್ರತಿನಿಧಿಗಳು) ಕೆಲಸ ನಿರ್ವಹಿಸಿರುತ್ತಾರೆ. ಆ ದಿನಗಳಲ್ಲಿ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಸಾಕಷ್ಟು ಇದ್ದು, ಇದರ ಜೊತೆಗೆ ಕಲ್ಲಣಿ ಗ್ರಾಮದ ಉರ್ದು ಪ್ರಾಥಮಿಕ ಶಾಲೆಯಲ್ಲಿ ಅತಿ ಅವಶ್ಯವಾಗಿ ಅದರ ಬಿಸಿಯೂಟ ತಯಾರು ಮಾಡುವ ಕೊಠಡಿಯನ್ನು ದುರಸ್ತಿ ಮಾಡಬೇಕಾಗಿತ್ತು ಹಾಗೂ ದೋಣಿಗಾಲ್‌ನಲ್ಲಿ ಸಿಸ್ಟರ್ನ್‌ಗಳನ್ನು ಅಳವಡಿಸುವ ಅವಶ್ಯಕತೆ ಇತ್ತು. ಈ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಗ್ರಾ.ಪಂ. ಯಲ್ಲಿ ಯಾವ ಅನುದಾನವು ಬಿಡುಗಡೆಯಾಗಿರಲಿಲ್ಲ. ಆ ಸಂದರ್ಭದಲ್ಲಿ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ 3 ಕೆರೆಗಳ ಅಭಿವೃದ್ಧಿಗಾಗಿ ರೂ. 4,15,910/- ಅನುದಾನವು ಮೇ 2006 ರಲ್ಲಿ ಬಿಡುಗಡೆಯಾಗಿದ್ದು ನಿಜ. ವಿಷಯ ಹೀಗಿದ್ದಾಗ ಗ್ರಾ.ಪಂ. ಯು ದಿ:29-06-2006 ರಂದು ಕೈಗೊಂಡ ಸಭಾ ನಿರ್ಣಯದಲ್ಲಿ ಮೇಲೆ ಹೇಳಿದ ಅತಿ ಅವಶ್ಯವೆನಿಸಿದ (ಅನುದಾನವೂ ಇಲ್ಲದ) ಬಾಬುಗಳಿಗೆ ಹೆಚ್ಚಿನ ಗಮನ ನೀಡಿ ಆಗಲೇ ಬಿಡುಗಡೆಯಾಗಿದ್ದ ರೂ. 4,15,910/- ಅನ್ನು ಸಧ್ಯಕ್ಕೆ ಬಳಕೆ ಮಾಡಿಕೊಂಡು ನಂತರದ ದಿನಗಳಲ್ಲಿ ಕೆರೆ ಅಭಿವೃದ್ಧಿಗೆ ಸಂಬಂಧಿತ ಅನುದಾನವನ್ನು ಸರ್ಕಾರಕ್ಕೆ ವಾಪಸ್ಸು ಜಮೆ ಮಾಡುವಂತೆ ಗ್ರಾಮ ಪಂಚಾಯಿತಿಯು ನಿರ್ಣಯವನ್ನು ಕೈಗೊಂಡಿರುತ್ತದೆ. ಆಗಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು ಈ ನಿರ್ಣಯವನ್ನು ಆಕ್ಷೇಪಿಸಿರುತ್ತಾರೆ. ಆದರೆ ಅಂತಹ ನಿರ್ಣಯವನ್ನು ಶಾಸನಬದ್ಧವಾಗಿ ಆಯ್ಕೆಯಾದ ಜನ ಪ್ರತಿನಿಧಿಗಳ ಇಂಗಿತವನ್ನು ಸಂಪೂರ್ಣವಾಗಿ ತಡೆಹಿಡಿಯಲು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಅಧಿಕಾರವಿರುವುದಿಲ್ಲ. ಗ್ರಾ.ಪಂ. ನಿರ್ಣಯದಂತೆ ದಿ:29-06-2006 ರಂದು ಕೈಗೊಂಡ ಕೆಲಸ ಕಾರ್ಯಗಳನ್ನು ಪಂಚಾಯತಿಯು ಕೈಗೊಂಡು ಮುಗಿಸಿರುತ್ತದೆ. ಈ ವಿಷಯವು ಅವರ ಗಮನಕ್ಕೆ ಬಂದಿರುವುದಿಲ್ಲ. ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಯೂ ತಿಳಿಸಿದಂತೆ ನೆನಪಿಲ್ಲ. ಗ್ರಾಮ ಪಂಚಾಯತಿ ಕೈಗೊಂಡ ನಿರ್ಣಯ ಹಾಗೂ ಕಾಮಗಾರಿಗಳು ಜನ ಹಿತಕ್ಕಾಗಿ ಕೈಗೊಂಡವುಗಳೇ ಆಗಿದ್ದು, ಗ್ರಾಮ ಪಂಚಾಯಿತಿಯು ಯಾವ ದುರುದ್ದೇಶದಿಂದಲೂ ಈ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲವೆಂದು ಹೇಳಬಹುದಾಗಿದೆ. ಪಂಚಾಯತ್ ರಾಜ್ ಕಾಯ್ದೆಯ ಅಧ್ಯಾಯ 3 ರಲ್ಲಿನ ಸೆಕ್ಷನ್ 57(3)ರ ಅರ್ಥದಲ್ಲಿ "ಗ್ರಾಮ ಪಂಚಾಯಿತಿ ನಿರ್ಣಯಗಳನ್ನು ತಪ್ಪೆಂದು ಸಾಧಿಸಲು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ಗ್ರಾಮ ಪಂಚಾಯಿತಿಯ ಯಾವ ಅನುದಾನವು ದುರ್ಬಳಕೆಯಾಗಿಲ್ಲ." ಅದರಲ್ಲೂ ಅವಶ್ಯವೆನಿಸಿದ 3

1966 ನಿಯಮ 3 (1) ನ್ನು ಸಂಪೂರ್ಣ ಉಲ್ಲಂಘನೆ ಮಾಡಿ ಕರ್ತವ್ಯ ಲೋಪ ಎಸಗಿರುವುದಾಗಿ ಆರೋಪ

**ಆರೋಪ-2**

ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಾಡುವ ಪ್ರತಿಯೊಂದು ಸಭಾ ನಿರ್ಣಯಗಳನ್ನು 15 ದಿವಸದೊಳಗೆ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುವ ನಿಯಮವಿದ್ದರೂ ಕೂಡ ಇವರು ನಿರ್ಣಯದ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸದಿರುವುದು ಇವರ ಕರ್ತವ್ಯ ನಿರ್ಲಕ್ಷ್ಯತೆಯಾಗಿರುತ್ತದೆ. (ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ (3)(1) ರ (11) (111) ನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುತ್ತಾರೆ.) ಆದರೆ, ಇವರು ಈ ರೀತಿ ಕರ್ತವ್ಯ ನಿರ್ವಹಿಸದೇ ಕರ್ತವ್ಯಲೋಪ ಎಸಗಿರುವುದಾಗಿ ಆರೋಪ

**ಮೇಲ್ಕಂಡ ಕಾರಣ ಕೇಳುವ ನೋಟೀಸಿಗೆ ಶ್ರೀ ಕೆ. ತಿಮ್ಮಶೆಟ್ಟಿ, ಇವರು ಮೇಲೆ ಓದಲಾದ (3) ರಲ್ಲಿನ ಪತ್ರದಲ್ಲಿ ಈ ಕೆಳಕಂಡಂತೆ ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.**

ಸಕಲೇಶಪುರ ತಾಲ್ಲೂಕು ಆನೆಮಹಲ್ ಗ್ರಾಮ ಪಂಚಾಯತಿಯಲ್ಲಿ ದಿ: 08-08-2004 ರಿಂದ 30-11-2007 ರವರೆಗೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದು, ಈ ಅವಧಿಯಲ್ಲಿ 2006-07ನೇ ಸಾಲಿನಲ್ಲಿ ದಿನಾಂಕ: 29-06-2006 ರಂದು ಗ್ರಾಮ ಪಂಚಾಯತಿಯಲ್ಲಿ ನಡೆದ ಗ್ರಾಮ ಪಂಚಾಯತಿ ಸದಸ್ಯರ ಸಾಮಾನ್ಯ ಸಭೆಯಲ್ಲಿ ಕೆರೆ ಅಭಿವೃದ್ಧಿಗೆ ಬಿಡುಗಡೆಯಾಗಿದ್ದ ಅನುದಾನವನ್ನು ಕುಡಿಯುವ ನೀರು ಹಾಗೂ ಇತರೆ ಕಾರ್ಯಕ್ರಮಗಳಿಗೆ ಬಳಸುವಂತೆ ದಿನಾಂಕ: 29-06-2006ರ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ್ದು, ಈ ಠರಾವು ಅಂಗೀಕರಿಸುವ ಸಮಯದಲ್ಲಿ ಕೆರೆ ಅಭಿವೃದ್ಧಿ ಅನುದಾನವನ್ನು ಈ ರೀತಿ ಬೇರೆ ಬಾಬುಗಳಿಗೆ ಬಳಸಲು ನಿಯಮಾವಳಿಯಲ್ಲಿ ಅವಕಾಶವಿಲ್ಲವೆಂದು ಸಾಮಾನ್ಯ ಸಭೆಯಲ್ಲಿ ಸ್ಪಷ್ಟಪಡಿಸಿದ್ದರೂ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿರುತ್ತಾರೆ. ಈ ವೇಳೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಸಕಲೇಶಪುರ ಇವರಿಗೂ ಕೂಡ ದೂರವಾಣಿ ಮೂಲಕ ಸಂಪರ್ಕಿಸಿ ವಿಷಯ ತಿಳಿಸಿರುವುದಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಕೂಡ ದೂರವಾಣಿ ಮೂಲಕ ಗ್ರಾಮ ಪಂಚಾಯತಿ ಅಧ್ಯಕ್ಷರೊಂದಿಗೆ ಮಾತನಾಡಿ ಇದು ನಿಯಮಬಾಹಿರವಾಗಿರುತ್ತದೆ. ಈ ಠರಾವನ್ನು ಮಾಡಬೇಡಿ ಎಂದು ತಿಳಿಸಿದರೂ ಅಂಗೀಕರಿಸಿರುತ್ತಾರೆ. ಆದ್ದರಿಂದ ಸದರಿ ಆರೋಪದಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

**ಶ್ರೀ ಆರ್.ಪಿ. ಶಿವಕುಮಾರ್, ಪ್ರಭಾರ ಪಂಚಾಯತಿ ವಿಸ್ತರ್ಣಾಧಿಕಾರಿ ಸಕಲೇಶಪುರ ತಾಲ್ಲೂಕು ಇವರ ವಿರುದ್ಧದ ದೋಷಾರೋಪಗಳು**

ಆನೆಮಹಲ್ ಗ್ರಾಮ ಪಂಚಾಯಿತಿ ಕೆರೆ ಅಭಿವೃದ್ಧಿ ಯೋಜನೆಗೆ ಬಿಡುಗಡೆಯಾಗಿದ್ದ ಅನುದಾನ ರೂ. 4,18,050/- ಗಳನ್ನು ಕುಡಿಯುವ ನೀರು ಹಾಗೂ ಇತರೆ ಕಾರ್ಯಕ್ರಮಗಳಿಗೆ ಬಳಸು ವಂತೆ ದಿನಾಂಕ: 29-06-2006 ರಂದು ಗ್ರಾಮ ಪಂಚಾಯತಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಠರಾವನ್ನು ಅಂಗೀಕರಿಸ ಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 237(1) ರಲ್ಲಿ ಗ್ರಾಮ ಪಂಚಾಯತಿ ನಿಯಮ ಬಾಹೀರವಾಗಿ ಕಾರ್ಯನಿರ್ವಹಿಸುತ್ತಿದ್ದ ಅಂತಹ ಆದೇಶ ವನ್ನು ತಡೆಹಿಡಿಯುವ/ರದ್ದುಪಡಿಸುವ ಅಧಿಕಾರ ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗಿದೆ. ಇವರು ಇಂತಹ ಉಲ್ಲಂಘನೆ ಯನ್ನು ಕೂಡಲೇ ಗುರುತಿಸಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಗಮನಕ್ಕೆ ತಂದು ಮಾರ್ಗಪಲ್ಲಟವನ್ನು ತಡೆಯಬಹುದಾಗಿತ್ತು ಆದರೆ ಇವರು ಈ ರೀತಿ ಕರ್ತವ್ಯ ನಿರ್ವಹಿಸದೆ ಕರ್ತವ್ಯಲೋಪವೆಸಗಿರುತ್ತಾರೆಂದು ಆರೋಪ.

ಬಾಬುಗಳಿಗೆ ಹಣವನ್ನು ಖರ್ಚು ಮಾಡಿದ್ದಾಗ ಗ್ರಾಮ ಪಂಚಾಯಿತಿ ನಿರ್ಣಯವನ್ನು ಸಾಧುವಲ್ಲವೆಂದು ನಿರ್ಣಯಿಸಲು ಬರುವುದಿಲ್ಲ. ಅದೇ ವರ್ಷದಲ್ಲಿ ಬಿಡುಗಡೆಯಾದ ಕುಡಿಯುವ ನೀರು, ಉರ್ದು ಶಾಲೆಯ ಕೊಠಡಿ ಹಾಗೂ ಸಿಸ್ಟರ್ನ್‌ನ ಬಾಬಿನ ಅನುದಾನವನ್ನು ಸರ್ಕಾರಕ್ಕೆ ಗ್ರಾಮ ಪಂಚಾಯಿತಿ ವಾಪಸ್ ಕಟ್ಟಿರುವುದು. ವಾಸ್ತವಾಂಶವಾಗಿದ್ದು, ಈ ಸಂಧರ್ಭದಲ್ಲಿ ಯಾವ ಅನುದಾನದ ದುರುಪಯೋಗ ಪ್ರಶ್ನೆಯು ಉದ್ಭವಿಸುವುದಿಲ್ಲ. ಹಾಗೆ ವಾಪಸ್ ಮಾಡಿದ ಅನುದಾನದ ಸಂಬಂಧಿತ ದಾಸ್ತವೇಜನ್ನು ತಮ್ಮ ಅವಲೋಕನಕ್ಕೆ ಸಲ್ಲಿಸಲಾಗಿದೆ. ಈ ವಿವರಣೆಯೊಡನೆ ಇತ್ತೀಚಿನ ಇದೇ ಸಕಲೇಶಪುರ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಸನ ರವರಿಗೆ ಬರೆದ ಪತ್ರದಲ್ಲಿ ಡಿ.ಡಿ.ಮುಖಾಂತರ ಮೇಲೆ ಹೇಳಿದ ಮೊತ್ತವನ್ನು ಸದರಿ ಗ್ರಾಮ ಪಂಚಾಯಿತಿಯು ಅಭಿವೃದ್ಧಿ ಖಾತೆ ಜಮೆ ಮಾಡಿರುವುದನ್ನು ಸ್ಪಷ್ಟಪಡಿಸಿರುತ್ತಾರೆ. ಅದೇ ರೀತಿ ದಿನಾಂಕ:06-02-2012ರ ಜಿಲ್ಲಾ ಪಂಚಾಯಿತಿ, ಹಾಸನದ ಮುಖ್ಯ ಲೆಕ್ಕಾಧಿಕಾರಿಗಳು ಇದೇ ಕಾರ್ಯನಿರ್ವಾಹಕ ಅಧಿಕಾರಿಗಳು ಸಕಲೇಶಪುರ ರವರಿಗೆ ಮೇಲೆ ಹೇಳಿದ ಮೊತ್ತವನ್ನು ಗ್ರಾಮ ಪಂಚಾಯಿತಿಯು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಜಮಾ ಮಾಡಿರುವ ಬಗ್ಗೆ ದೃಡೀಕರಿಸಿರುತ್ತಾರೆ. ಈ ಸಂದರ್ಭದಲ್ಲಿ ತಾವು ತಾಲ್ಲೂಕು ಪಂಚಾಯಿತಿ, ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಲೂ ಕೂಡ ಆನೇಮಹಲ್ ಗ್ರಾಮ ಪಂಚಾಯಿತಿಯು ಕೈಗೊಂಡ ಕಾಮಗಾರಿಗಳನ್ನು ಅನಾವಶ್ಯಕ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ. ಅವು ಅತೀ ಅವಶ್ಯಕವಾಗಿದ್ದವು ಜನ ಪ್ರತಿನಿಧಿಗಳು ಕೈಗೊಂಡ ನಿರ್ಣಯಗಳಿಗೆ ಅಲ್ಲಿಯ ಸ್ಥಳೀಯ ಸಮಸ್ಯೆಗಳು ವಾಸ್ತವಾಗಿ ತಿಳಿದವುಗಳೇ ಆಗಿರುತ್ತವೆ. ಅವುಗಳು ಆಗಿದ್ದಾಗ ಸದರಿ ವಿಷಯದಲ್ಲಿ ಯಾವ ದುರ್ನಡತೆಯನ್ನು ಯಾರು ಕಾಣಲು ಸಾಧ್ಯವಿಲ್ಲ. ಗ್ರಾಮ ಪಂಚಾಯಿತಿಯು ಬಿಡುಗಡೆಯಾದ ಅನುದಾನವನ್ನು ಮಾರ್ಗಪಲ್ಲಟ ಮಾಡುತ್ತೇವೆಂದು ತಿಳಿಸಿದ್ದಲ್ಲಿ ಅಂತಹ ನಿರ್ಣಯಗಳಿಗೆ ಒತ್ತಾಸೆ ನೀಡಿರುತ್ತಿರಲಿಲ್ಲ. ಈ ತಾಲ್ಲೂಕಿನಲ್ಲಿ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳ ಸದುದ್ದೇಶ ನಿರ್ಣಯಗಳನ್ನು ಪ್ರಶ್ನಿಸುವಂತಹ ಅದರಲ್ಲೂ ಚುನಾಯಿತ ಪ್ರತಿನಿಧಿಗಳ ನಿರ್ಣಯಗಳನ್ನು ವಿಟೋ ಮಾಡುವಂತಹ ಅಧಿಕಾರ ಚಲಾಯಿಸುವುದು. ಸಾಧ್ಯವಾಗದ ವಿಷಯ ಹಾಗಾಗಿ ಅವರಲ್ಲಿ ಯಾವ ದುರ್ನಡತೆಯು ಕಾಣದಿರುವುದಿಲ್ಲ. ಅದರಲ್ಲೂ ಗ್ರಾಮ ಪಂಚಾಯಿತಿಯು ಮಾರ್ಗಪಲ್ಲಟ ಮಾಡಿದ ಅನುದಾನವನ್ನು ದಾಖಲೆಗಳ ಪ್ರಕಾರ ಮರುಪಾವತಿ ಮಾಡಲಾಗಿರುತ್ತದೆ. ಈ ಸಂದರ್ಭದಲ್ಲಿ ಯಾವ ನಿರ್ಲಕ್ಷತೆಯು ಇರಲಿಲ್ಲವೆಂದು ತಿಳಿಸಿದ್ದಾರೆ. ಸಕಲೇಶಪುರ ತಾಲ್ಲೂಕು ಪಂಚಾಯತಿಯಲ್ಲಿ ಪ್ರ.ದ.ಸ. ರಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ತಾಲ್ಲೂಕು ಪಂಚಾಯತಿಯಿಂದಾಗಲೀ, ಜಿಲ್ಲಾ ಪಂಚಾಯತಿಯಿಂದಾಗಲೀ ಪಂಚಾಯತಿ ವಿಸ್ತರಣಾಧಿಕಾರಿಯ ಪ್ರಭಾರವನ್ನು ನೀಡಿರುವುದಿಲ್ಲೇ ಬಗ್ಗೆ ದಿ:21-12-2013 ರ ಪತ್ರದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿ, ಸಕಲೇಶಪುರ ರವರಿಂದ ದೃಡೀಕರಣವನ್ನು ಪಡೆದು ಸಲ್ಲಿಸಿರುವುದಾಗಿ ಆನೇಮಹಲ್ ಗ್ರಾಮ ಪಂಚಾಯತಿಯಲ್ಲಿ ಅನುದಾನ ಮಾರ್ಗಪಲ್ಲಟ ವಾಗಿರುವುದಕ್ಕೂ ತಮಗೂ ಯಾವುದೇ ಸಂಬಂಧವಿರುವುದಿಲ್ಲವಾದ್ದರಿಂದ ಪ್ರಕರಣದಿಂದ ದೋಷಮುಕ್ತನಾಗಿಸ ಬೇಕೆಂದು ಕೋರಿರುತ್ತಾರೆ.

**ಶ್ರೀ ಕೆ.ತಿಮ್ಮಶೆಟ್ಟಿ, ಹಿಂದಿನ ಕಾರ್ಯದರ್ಶಿ, ಆನೇಮಹಲ್ ಗ್ರಾ.ಪಂ. ಸಕಲೇಶಪುರ ತಾಲ್ಲೂಕು ಇವರ ವಿರುದ್ಧದ ದೋಷಾರೋಪಗಳು**

**ಆರೋಪ-1**

ಇವರು ದಿನಾಂಕ 08-08-2004 ರಿಂದ 30-11-2007 ರ ವರೆಗೆ ಆನೇಮಹಲ್ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ, ಅವಧಿಯ 2006-07 ನೇ ಸಾಲಿನಲ್ಲಿ ದಿನಾಂಕ 29-06-2006 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಸಣ್ಣ ನೀರಾವರಿ ಯೋಜನೆಯಲ್ಲಿ ಆನೆಮಹಲ್ ಗ್ರಾಮ ಪಂಚಾಯಿತಿಗೆ ಬಿಡುಗಡೆಯಾಗಿದ್ದ ಅನುದಾನವನ್ನು ನಿಯಮ ಬಾಹಿರವಾಗಿ ಮಾರ್ಗಪಲ್ಲಟ ಮಾಡಿ ಪುನ: ಮರು ಜಮೆ ಮಾಡುವುದಾಗಿ ನಿರ್ಣಯಿಸಿ ಬೇರೆ ಉದ್ದೇಶಕ್ಕೆ ಖರ್ಚು ಮಾಡಿರುತ್ತಾರೆ.. ನಂತರ ಸದರಿ ಅನುದಾನವನ್ನು ಹಂತ ಹಂತವಾಗಿ ಗ್ರಾಮ ಪಂಚಾಯಿತಿಯವರು ಮರು ಜಮೆ ಮಾಡಿರುತ್ತಾರೆ. ಇದು ಇವರ ಕರ್ತವ್ಯ ನಿರ್ಲಕ್ಷ್ಯತೆಯಾಗಿದ್ದು, ಕರ್ನಾಟಕ ಸೇವಾ ನಡತೆ (ವರ್ತನೆ) ನಿಯಮಗಳು

**ಮೇಲ್ಕಂಡ ಕಾರಣ ಕೇಳುವ ನೋಟೀಸಿಗೆ ಶ್ರೀ ಆರ್.ಪಿ. ಶಿವಕುಮಾರ್, ಇವರು ಮೇಲೆ ಓದಲಾದ (3) ರಲ್ಲಿನ ಪತ್ರದಲ್ಲಿ ಈ ಕೆಳಕಂಡಂತೆ ತಮ್ಮ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.**

ಗ್ರಾಮ ಪಂಚಾಯತಿಯಲ್ಲಿ ನಡೆಯುವ ಪ್ರತಿಯೊಂದು ಸಭಾ ನಡವಳಿಯನ್ನು 15 ದಿನಗಳೊಳಗೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಕಳುಹಿಸುವ ನಿಯಮವಿರುತ್ತದೆ. ಆದರೆ ಆ ಅವಧಿಯಲ್ಲಿ ಗ್ರಾಮ ಪಂಚಾಯತಿ ನಡವಳಿಯನ್ನು ಆಡಳಿತ ಮಂಡಳಿಯ ಒತ್ತಡದಿಂದ ನಿಗದಿತ ಅವಧಿಯಲ್ಲಿ ನಡವಳಿ ಪ್ರತಿಯನ್ನು ಕಳುಹಿಸಲು ಸಾಧ್ಯವಾಗಿರುವುದಿಲ್ಲ. ಇದು ಉದ್ದೇಶಪೂರ್ವಕವಾಗಿ ತಮ್ಮ ನಿರ್ಲಕ್ಷ್ಯದಿಂದ ಈ ರೀತಿ ಬೇಜವಾಬ್ದಾರಿತನ ತೋರಿಸಿರುವುದಿಲ್ಲ. ಆದ್ದರಿಂದ ಸದರಿ ಆರೋಪದಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

ಆಪಾದಿತ ಅಧಿಕಾರಿಗಳು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 124 ವಿಸೇಬಿ 2010 ಬೆಂಗಳೂರು ದಿನಾಂಕ:12-03-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ 1) ಶ್ರೀ ಎಸ್. ಶಶಿಕುಮಾರ್ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಕಲೇಶಪುರ 2) ಶ್ರೀ ಚಂದ್ರಶೇಖರ್, ಪಂಚಾಯತಿ ವಿಸ್ತರ್ಣಾಧಿಕಾರಿ ತಾ.ಪಂ. ಸಕಲೇಶಪುರ 3) ಶ್ರೀ ಆರ್.ಪಿ. ಶಿವಕುಮಾರ್, ಪ್ರಭಾರ ಪಂಚಾಯತಿ ವಿಸ್ತರ್ಣಾಧಿಕಾರಿ, ಸಕಲೇಶಪುರ ತಾಲ್ಲೂಕು ಇವರುಗಳ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಿದೆ.

ಮುಂದುವರೆದು ಶ್ರೀ ಕೆ.ತಿಮ್ಮಶೆಟ್ಟಿ, ಹಿಂದಿನ ಕಾರ್ಯದರ್ಶಿ, ಆನೆಮಹಲ್ ಗ್ರಾ.ಪಂ. ಸಕಲೇಶಪುರ ತಾಲ್ಲೂಕು ಇವರು ಗ್ರಾಮ ಸಭೆ ನಡವಳಿಯನ್ನು 15 ದಿನಗಳೊಳಗಾಗಿ ಕಾರ್ಯನಿರ್ವಾಹಕ ಅಧಿಕಾರಿ ರವರಿಗೆ ಕಳುಹಿಸದಿರುವ ಅಪಾದನೆ ರುಜುವಾತಾಗಿರುವುದರಿಂದ ಅವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(II) ರಡಿಯಲ್ಲಿ "ವಾಗ್ದಂಡನೆ" ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ಧಮಲ್ಲಪ್ಪ) 12/3/15
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ
4. ಸರ್ಕಾರದ ಅಧೀನ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಬೆಂಗಳೂರು.
5. ಸಂಬಂಧಿಸಿದ ಅಧಿಕಾರಿ/ನೌಕರರುಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಇವರ ಮುಖಾಂತರ)

**ಪ್ರತಿಯನ್ನು ಮಾಹಿತಿಗಾಗಿ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.